## ಹ್ಯಾಟ್ರಿಕ್‌ನತ್ತ ಧ್ರುವ ಚಿತ್ತ...

ಭರ್ಜರಿ ಎನ್ನುವುದು ಗಾಂಧಿನಗರದಲ್ಲಿ ಸಿನಿಮಾಗಳ ಬಣ್ಣನೆಗೆ ಮತ್ತೆ ಮತ್ತೆ ಬಳಕೆಯಾಗುವ ವಿಶೇಷಣಗಳಲ್ಲೊಂದು. ಈ ವಿಶೇಷಣವನ್ನೇ ಶೀರ್ಷಿಕೆಯಾಗಿಸಿಕೊಂಡ, ಧ್ರುವ ಸರ್ಜಾ ನಟನೆಯ 'ಭರ್ಜರಿ' ಈಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಸೆ. 15ರಂದು ತೆರೆಗೆ).

ಇದು ಧ್ರುವ ನಟನೆಯ ಮೂರನೇ ಸಿನಿಮಾ. ಅವರ ಮೊದಲೆರಡು ಚಿತ್ರಗಳಾದ 'ಅದ್ದೂರಿ' ಹಾಗೂ 'ಬಹದ್ದೂರ್' ದೊಡ್ಡ ಯಶಸ್ಸು ಗಳಿಸಿದ್ದವು. ಈ ಯಶಸ್ಸಿನ ಅಲೆಯಲ್ಲಿ ಸೆಟ್ಟೇರಿದ 'ಭರ್ಜರಿ' ತೆರೆಕಾಣುವಲ್ಲಿ ಮಾತ್ರ ಸಾಕಷ್ಟು ವಿಳಂಬ ನೀತಿ ಅನುಸರಿಸಿದೆ. ಸೆಟ್ಟೇರಿದ ಸುಮಾರು ಎರಡೂವರೆ ವರ್ಷಗಳ ನಂತರ ಸಿನಿಮಾ ತೆರೆಕಾಣುತ್ತಿದೆ. ಈ ವಿಳಂಬಕ್ಕೆ ಕಾರಣಗಳನ್ನು ಹುಡುಕುವ ಬಗ್ಗೆ ಧ್ರುವ ಅವರಿಗೆ ಆಸಕ್ತಿಯಿಲ್ಲ. ಸಿನಿಮಾ ತಡವಾದರೂ ಚೆನ್ನಾಗಿ ರೂಪುಗೊಂಡಿದೆ. ಪ್ರೇಕ್ಷಕರಿಗೆ ಇಷ್ಟವಾಗಲಿದೆ ಎನ್ನುವ ನಿರೀಕ್ಷೆ ಅವರದು. ಈ ಚಿತ್ರದ ಮೂಲಕ ಗೆಲುವಿನ ಹ್ಯಾಟ್ರಿಕ್ ಸವಿಯುವ ಉತ್ಸಾಹದಲ್ಲಿ ಅವರಿದ್ದಾರೆ. ಬದುಕಿನ ಗುರಿಗಳನ್ನು ನಿರಂತರವಾಗಿ ಬದಲಿಸಿಕೊಂಡು ಹೋಗುವ ತರುಣನ ಕಥೆ ಈ ತಲೆಮಾರಿನ ಪ್ರೇಕ್ಷಕರಿಗೆ ಇಷ್ಟವಾಗುವಂತೆ ರಂಗುರಂಗಾಗಿ ರೂಪುಗೊಂಡಿದೆಯಂತೆ.

ಚೇತನ್ 'ಭರ್ಜರಿ' ಚಿತ್ರದ ನಿರ್ದೇಶಕರು. 'ಅದ್ದೂರಿ' ಚಿತ್ರದಲ್ಲಿ ಸಹಾಯಕ ನಿರ್ದೇಶಕರಾಗಿದ್ದ ಅವರು, 'ಬಹದ್ದೂರ್' ಮೂಲಕ ಸ್ವತಂತ್ರ ನಿರ್ದೇಶಕರಾಗಿದ್ದರು. ಈಗ 'ಭರ್ಜರಿ' ಮೂಲಕ ಮತ್ತೊಮ್ಮೆ ಗೆಲುವಿನ ರುಚಿ ಸವಿಯುವ ತವಕದಲ್ಲಿದ್ದಾರೆ. ಚಿತ್ರದ ಕಥೆ ಹಾಗೂ ಸಾಹಿತ್ಯವೂ ಅವರದ್ದೇ. ಶ್ರೀಷ ಕೂದವಳ್ಳಿ ಛಾಯಾಗ್ರಹಣ ಹಾಗೂ ಹರಿಕೃಷ್ಣರ ಸಂಗೀತ ಚಿತ್ರಕ್ಕಿದೆ. ಸಿನಿಮಾದ ಗೀತೆಗಳು ಜನಪ್ರಿಯವಾಗಿರುವುದು ಚಿತ್ರತಂಡಕ್ಕೆ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ. ರಚಿತಾ ರಾಮ್ ಹಾಗೂ ಹರಿಪ್ರಿಯಾ ಚಿತ್ರದ ನಾಯಕಿಯರು. ಮಾಸ್ತಿಗುಡಿ ಚಿತ್ರೀಕರಣದಲ್ಲಿ ಸಾವಿಗೀಡಾಗಿದ್ದ ಅನಿಲ್ ಹಾಗೂ ಉದಯ್ ಈ ಚಿತ್ರದ ತಾರಾಗಣದಲ್ಲಿದ್ದಾರೆ.



## ಕಿಲಾಡಿಗಳ ಹಾಡು-ಹಸೆ



'ಕಾಮಿಡಿ ಕಿಲಾಡಿಗಳು' ಕನ್ನಡ ಕಿರುತೆರೆಯ ಜನಪ್ರಿಯ ರಿಯಾಲಿಟಿ ಷೋಗಳಲ್ಲೊಂದು. ಈ ನಗೆ ಕುಟುಂಬದ ಸದಸ್ಯರು ನಿರ್ಮಿಸಿರುವ 'ಜಂತರ್ ಮಂತರ್' ಚಿತ್ರ ತೆರೆ ಕಾಣುವ ಸಿದ್ಧತೆ ನಡೆಸುತ್ತಿದೆ.

ರಿಯಾಲಿಟಿ ಷೋನಲ್ಲಿ ಸ್ಪರ್ಧಿಯಾಗಿ ನಟಿಸಿದ್ದ ಗೋವಿಂದೇಗೌಡ 'ಜಂತರ್ ಮಂತರ್' ಚಿತ್ರದ ನಿರ್ದೇಶಕರು. ಈ ಷೋದಲ್ಲಿ ಸಹಸ್ಪರ್ಧಿಗಳಾಗಿದ್ದ ಹಿತೇಶ್, ಶಿವರಾಜ್ ಕೆ.ಆರ್. ಪೇಟೆ, ಸಂಜು ಬಸಯ್ಯ, ದಿವ್ಯಶ್ರೀ ಚಿತ್ರದಲ್ಲಿ ನಟಿಸಿದ್ದಾರೆ. ಇವರ ಜೊತೆಗೆ ಶೋಭರಾಜ್, ಬಿರಾದಾರ್, ವಿ. ಮನೋಹರ್ ಅವರಂಥ ಅನುಭವಿಗಳೂ ತಾರಾಗಣದಲ್ಲಿದ್ದಾರೆ. ಷೋನ ತೀರ್ಪುಗಾರರಾಗಿದ್ದ ಜಗ್ಗೇಶ್ ಚಿತ್ರದ ಗೀತೆಯೊಂದನ್ನು ಹಾಡಿದ್ದಾರೆ.

ಮಾಸ್ಟರ್ ಆನಂದ್ ಹಾಗೂ ನಯನಾ 'ಜಂತರ್ ಮಂತರ್' ಕುಟುಂಬವನ್ನು ಹೊಸದಾಗಿ ಸೇರಿಕೊಂಡಿರುವ ಕಿಲಾಡಿಗಳು. ಆನಂದ್ 'ಕಾಮಿಡಿ ಕಿಲಾಡಿಗಳು' ರಿಯಾಲಿಟಿ ಷೋ ನಿರೂಪಣೆಯ ಮೂಲಕ ಸಹೃದಯರ ಗಮನಸೆಳೆದಿದ್ದರೆ, ಸ್ಪರ್ಧಿಯಾಗಿ ಭಾಗವಹಿಸಿದ್ದ ನಯನಾ ತಮ್ಮ ಪ್ರತಿಭೆಯ ಮೂಲಕ ನೋಡುಗರ ಮೆಚ್ಚುಗೆಗೆ ಪಾತ್ರರಾಗಿದ್ದರು. ಈಗ ಇವರಿಬ್ಬರ ಅಭಿನಯದಲ್ಲಿ ಗೀತೆಯೊಂದನ್ನು ನಿರ್ದೇಶಕರು ಚಿತ್ರೀಕರಿಸಿದ್ದಾರೆ. 'ಓ ರತಿಯೇ ರಮಣಗೆ ಒಲಿದೆ' ಎನ್ನುವ ಗೀತೆಯನ್ನು ಗೋವಿಂದೇಗೌಡರೇ ರಚಿಸಿದ್ದು, ಈ ಗೀತೆಗೆ ಆನಂದ್–ನಯನಾ ಜೀವ ತುಂಬಿದ್ದಾರೆ.